ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.
ಸಿ.ಸಿ. ನಂ. 731-2020
............................ ವಿರುದ್ಧ ..............................

PW 01
CW 01

ಸಾಕ್ಷಿಯ ಹೆಸರು : **ಕಿರಣ ಬಿ ಪಾಟೀಲ**
ತಂದೆಯ ಹೆಸರು : **ಬಸವನಗೌಡ ಪಾಟೀಲ**
ವಯಸ್ಸು : 29 **ವರ್ಷ**
ಉದ್ಯೋಗ : **ಪಿ.ಎಸ್.ಐ**
ವಾಸ್ತವ್ಯ : **ದಾಂಡೇಲಿ ನಗರ .**

ದಿನಾಂಕಃ 16-04-2024 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರುಃ**

ನಾನು ದಿಃ 28-01-2020 ರಿಂದ ದಿಃ 26-06-2021 ರವರೆಗೆ ರಾಮನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 24-03-2020 ರಿಂದ ದೇಶ್ಯಾದ್ಯಾಂತ ಕರೋನ ನಿಮಿತ್ಯ ಲಾಕ್ ಡೌನ ಇರುವಾಗ ದಿಃ 12-04-2020 ರಂದು ಸಂಜೆ 4-00 ಗಂಟೆಗೆ ನಾನು ಗಸ್ತಿನಲ್ಲಿರುವಾಗ ಚಾಸಾ. 11 ರವರು ಆರೋಪಿಯು ಆನಮೋಡದ ತಮ್ಮ ನಿವಾಸದಲ್ಲಿ ಅನಧೀಕೃತವಾಗಿ ಮಧ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು, ನಂತರ ನಾನು ಮಾನ್ಯ ಡಿ.ವಾಯ್.ಎಸ್.ಪಿ ರವರು ಮಾಹಿತಿಯನ್ನು ತಿಳಿಸಿ, ನಂತರ ಚಾಸಾ . 4 ರವರು 17 ಜನ, ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ರಾಮನಗರ ಠಾಣೆಗೆ 5-15 ಗಂಟೆಗೆ ಬಂದಿರುತ್ತಾರೆ. ನಂತರ ಚಾಸಾ 12 ರವರ ಮೂಲಕ ಇಬ್ಬರು ಚಾಸಾ 2 ಮತ್ತು 3 ಪಂಚರನ್ನು ಠಾಣೆಗೆ ಬರಮಾಡಿಕೊಂಡು ಪ್ರಕರಣದ ಮಾಹಿತಿಯನ್ನು ತಿಳಿಸಿದ ಪಂಚರಾಗಲು ಕೋರಿ ಅವರು ಒಪ್ಪಿದ ಮೇರೆಗೆ, ಸಂಜೆ 5-30 ಗಂಟೆಗೆ ಮೂರು ಇಲಾಖಾ ವಾಹನಗಳಲ್ಲಿ ಆನಮೋಡಗೆ ಹೋಗಿರುತ್ತೇವೆ. ಆರೋಪಿಯ ಮನೆಗೆ

ಸಂಜೆ 6-20 ಕ್ಕೆ ತಲುಪಿರುತ್ತೇವೆ. ನಂತರ ಆರೋಪಿಯನ್ನು ವಿಚಾರಿಸಿದಾಗ ಆರೋಪಿ ತನ್ನ ಹೆಸರು ಮತ್ತು ವಿಳಾಸವನ್ನು ತಿಳಿಸಿರುತ್ತಾನೆ. ಆತನನ್ನು ಪ್ರಶ್ನಿಸಿದಾಗ ಸಂಪರ್ಕ ಉತ್ತರ ಇಲ್ಲದೇ ಇರುವ ಕಾರಣ, ಪಂಚರ ಸಮಕ್ಷಮ ಮನೆಯ ಸುತ್ತ ಮುತ್ತ ಹುಡುಕಿದಾಗ, ಮನೆಯ ಹಿಂದೆ ಕಂಪೌಂಡನ ಒಳಗೆ ಹುಡುಕಿದಾಗ, ಕಸದ ರಾಶಿಯು ಇದ್ದು, ಅದರಲ್ಲಿ ಏನು ಇದೆ ಎಂದು ವಿಚಾರರಿಸಿದಾಗ ಕಸ ಇರುತ್ತದೆ ಎಂದು ತಿಳಿಸಿರುತ್ತಾರೆ. ಅನುಮಾನಸ್ಪದವಾಗಿ ಷದ್ರಿ ರಾಶಿಯನ್ನು ಪರಿಶೀಲಿಸಲಾಗಿ, ಎಂಟು ಬಿಳಿಯ ಬಣ್ಣದ ರಟ್ಟಿನ ಬಾಕ್ಸಗಳು ಇರುವುದು ಕಂಡು ಬಂದಿರುತ್ತದೆ.

ಷದ್ರಿ ರಟ್ಟಿನ ಬಾಕ್ಸಗಳಲ್ಲಿ ಏನಿದೇ ಎಂದು ವಿಚಾರಿಸಿದಾಗ ಆತ ಭಯದಿಂದ ಗೋವಾ ರಾಜ್ಯದಲ್ಲಿ ತಯಾರಾದ ಸಾರಾಯಿಗಳನ್ನು ಮಾರಾಟ ಮಾಡುವ ಉದ್ದೇಶದಿಂದ ತಂದಿರುವುದಾಗಿ ತಿಳಿಸಿರುತ್ತಾನೆ. ಷದ್ರಿ ಸಾರಾಯಿಯನ್ನು ಹೊಂದಲು ಯಾವುದೇ ಪಾಸ- ಯಾ- ಪರ್ಮಿಟ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಷದ್ರಿ ಮದ್ಯವನ್ನು ತನ್ನ ಮಾಲಿಕತ್ವದ ಓಮಿನಿ ವಾಹನ ಸಂಖ್ಯೆ ಜಿಎ-01-ಇ -2397 ನೇದ್ದರಲ್ಲಿ ಗೋವಾ ರಾಜ್ಯದಿಂದ ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾರೆ.

ನಂತರ ರಟ್ಟಿನ ಬಾಕ್ಸಗಳನ್ನು ಪಂಚರ ಸಮಕ್ಷಮ ತೆಗೆದುನೋಡಿದಾಗ 6 ಬಾಕ್ಸಗಳಲ್ಲಿ ರಾಯಲ್ ಟ್ಯಾಗ್ಸನ 750 ಎ.ಎಲ್ ಒಟ್ಟು 61 ಬಾಟಲಿಗಳು , ಮತ್ತೊಂದು ಬಾಕ್ಸ ಓಲ್ಡ ಬಿಲ್ಲ ಸ್ಪೇಷಲ್ ವಿಸ್ಕಿಯ 180 ಎಮ್.ಎಲ್‌ನ ಒಟ್ಟು 48 ಬಾಟಲಿಗಳು, ಮತ್ತೊಂದು ಬಾಕ್ಸನಲ್ಲಿ ರಿಯಲ್ ವಿಸ್ಕಿಯ 750 ಎಮ್.ಎಲ್‌ನ ಒಟ್ಟು 09 ಬಾಟಲಿಗಳು ಇರುವುದು ಕಂಡು ಬಂದಿರುತ್ತದೆ. ನಂತರ ಪಂಚರ ಸಮಕ್ಷಮ ಪ್ರತಿಯೊಂದು ಬಾಕ್ಸನಿಂದ ತಲಾ ಎರಡು ಬಾಟಲಿಗಳು ಹಾಗೂ ಒಂದು ಬಾಟಲಿ ಇದ್ದ ಬಾಕ್ಸನಿಂದ ಒಂದು ಬಾಟಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು, ಹಾಗೂ ಅವುಗಳನ್ನು ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ್ ಮಾಡಿ ನನ್ನ ಹಾಗೂ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ಉಳಿದ ಬಾಟಲಿಗಳಿಗೂ ಸಹ ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ ಮಾಡಿ ನನ್ನ ಹಾಗೂ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ನಂತರ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ವಾಹನವನ್ನು ಕೇಳಲಾಗಿ, ಅದು ಸ್ಥಳದಲ್ಲಿಯೇ ಇದ್ದು ,ಅದನ್ನು ಸಹ ಪಂಚರ ಸಮಕ್ಷಮವಶಕ್ಕೆ ಪಡೆದುಕೊಂಡಿರುತ್ತೇವೆ. ನಂತರ ರಾತ್ರಿ 06-40 ರಿಂದ 09-30 ರವರೆಗೆ ಪಂಚನಾಮೆಯನ್ನು ಜರುಗಿಸಿ ನಂತರ ಆರೋಪಿ ಹಾಗೂ ಮಧ್ಯವನ್ನು ವಶಪಡಿಸಿಕೊಂಡಿರುತ್ತೇವೆ.

ನಂತರ ಘಟನೆಯ ಬಗ್ಗೆ ಪೊಲೀಸ್ ಠಾಣೆಗೆ ಬಂದು ಚಾಸಾ 30 ರವರಿಗೆ ದೂರನ್ನು ನೀಡಿರುತ್ತೇವೆ. ಹಾಗೂ ಮುಂದಿನ ತನಿಖೆಗಾಗಿ ಆರೋಪಿ ಹಾಗೂ ಮದ್ಯವನ್ನು ಎಸ್.ಎಚ್.ಓ ರವರಿಗೆ ಹಸ್ತಾಂತರಿಸಿರುತ್ತೇವೆ. ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾ ನಿಪಿ 1 ಎಂದು ಗುರುತಿಸಲಾಯಿತು, ಅದರಲ್ಲಿರುವ ನನ್ನ ಸಹಿಯನ್ನು ಗುರುತನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾ ನಿಪಿ. 2 ಎಂದು ಗುರುತಿಸಲಾಯಿತು, ಅದರಲ್ಲಿರುವ ನನ್ನ ಸಹಿಯನ್ನು ಗುರುತನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿವರುವ ವಶಪಡಿಸಿಕೊಂಡ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮಾದರಿ ಬಾಟಲಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು. ಮಾ 1 ಎಂದು, ನನ್ನ ಸಹಿಯನ್ನು ಕ್ರಮವಾಗಿ ಮು. ಮಾ 1(ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಓಮಿನಿ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ. ವಿ.ಎಸ್.ಜೆ. ವಕೀಲರಿಂದ.**

1. ನಾನು ಬಜಾರ ಹಾಗೂ ಕ್ಯಾಸರ ಲ್ಯಾಕನಲ್ಲಿರುವಾಗ ಬಾತ್ಮಿ ಬಂದಿರುತ್ತದೆ. ಕ್ಯಾಸರ ಲ್ಯಾಕಗೆ 4 ಮೀಟರ ದೂರದಲ್ಲಿರುವಾಗ ಬಾತ್ಮಿ ಬಂದಿರುತ್ತದೆ. ಸದ್ರಿ ವಿಷಯವನ್ನು ದೂರಿನಲ್ಲಿ ನಮೂದಿಸಿಲ್ಲ. ಬಾತ್ಮಿ ಬಂದ ಸ್ಥಳದಿಂದ ಆರೋಪಿಯ ಮನೆಯು ಸುಮಾರು 15– 20 ಕಿಲೋ ಮೀಟರ ದೂರದಲ್ಲಿರುತ್ತದೆ. ಅಲ್ಲಿಂದ ರಾಮನಗರ ಠಾಣೆಯು ಸಹ ಸುಮಾರು 15– 20 ಕಿಲೋ ಮೀಟರ ದೂರದಲ್ಲಿರುತ್ತದೆ. ನಾನು ಠಾಣೆಗೆ ತಲುಪಿದಾಗ ಸಂಜೆ 4–30 ಗಂಟೆಯಾಗಿತ್ತು. ಆರೋಪಿಯು ಮನೆಯನ್ನುಶ ೋದನೆ ಮಾಡಲು ನ್ಯಾಯಾಲಯದಿಂದ ಶೋಧನಾ ಸಮುಚ್ಚಿತ ವಾಟೆಂಟನ್ನು ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ನಾವು ಆರೋಪಿಯ ಮನೆಯ ಒಳಗೆ ಶೋಧನೆ ಮಾಡಿರುವುದಿಲ್ಲ. ಕಸದ ರಾಶಿಯಲ್ಲಿ ಪರಿಶೀಲನೆ ಮಾಡಿದ ಬಳಿಕ ಆರೋಪಿಯ ಮನೆಯ ಒಳಗೆ ಹೋಗಿ ಪರಿಶೀಲನೆ ಮಾಡಿರುವುದಿಲ್ಲ. ವಾರೆಂಟ ಇಲ್ಲದ ಕಾರಣ ಮನೆಯ ಒಳಗೆ ಪರಿಶೀಲನೆ

ಮಾಡಿರುವುದಿಲ್ಲ. ಆರೋಪಿಯ ಮನೆಯ ಒಳಗೆ ಆರೋಪಿಯ ಪತ್ನಿ ಹಾಗೂ ಮಕ್ಕಳು ವಾಸವಿರುತ್ತಾರೆ.

2. ಆರೋಪಿಯ ಮನೆಯ ಹಿಂಭಾಗದ ಗೋಡೆಯ ಉದ್ದ ಅಗಲ ನನಗೆ ಗೊತ್ತಿಲ್ಲ. ಗೋಡೆಯ ಆರೋಪಿಯ ಮನೆಯ 4 ಬದಿ ಇರುತ್ತದೆ. ಸದ್ರಿ ವಿಷಯವನ್ನು ಪಂಚನಾಮೆಯಲ್ಲಿ ಹಾಗೂ ದೂರನಲ್ಲಿ ಬರೆದಿಲ್ಲ. ಚಾಸಾ 4 ಹಾಗೂ ಸಿಬ್ಬಂದಿಗಳು 5-15 ಕ್ಕೆ ಠಾಣೆಗೆ ಬಂದಿರುತ್ತಾರೆ. ಪಂಚರನ್ನು ನಿಖರವಾಗಿ ಎಲ್ಲಿಂದ ಕರೆತಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಠಾಣೆಯಿಂದ ಆರೋಪಿಯ ಮನೆಯು ಸುಮಾರು 20-25 ಕಿಲೋ ಮೀಟರ ದೂರದಲ್ಲಿರುತ್ತದೆ. ಕರೋನ ಕಾರಣ ನಮ್ಮ ಸಿಬ್ಬಂದಿಯನ್ನು ಆನಮೋಡ ಅಬಕಾರಿ ಚೆಕ್ಕ ಪೋಸ್ಟನ ಬಳಿ ಕರ್ತವ್ಯಕ್ಕೆ ನಿಯೋಜಿಸಿರುವುದಿಲ್ಲ. ಆರ್.ಟಿ.ಓ ಚೆಕ್ಕ ಪೋಸ್ಟನ ಬಳಿ ಹಾಕಿರುತ್ತಾರೆ. ಅಲ್ಲಿಂದ ಆರೋಪಿಯು ಮನೆಯು ಸುಮಾರು 04-05 ಕಿಲೋ ಮೀಟರ ದೂರದಲ್ಲಿರುತ್ತದೆ. ಆರ್.ಟಿ.ಓ ಚೆಕ್ಕ ಪೋಸ್ಟನ ಸಿಬ್ಬಂದಿಗೆ ಪಂಚರನ್ನು ಕರೆ ತರುವಂತೆ ಕರೆ ಮಾಡಿರುವುದಿಲ್ಲ.

3. ಪಂಚರು ಕೆಎ-30-ಜಿ-369 ಇಲಾಖಾ ವಾಹನದಲ್ಲಿ ಬಂದಿರುತ್ತಾರೆ. ಆನಮೋಡ ಚೆಕ್ಕ ಪೋಸ್ಟನಿಂದ ಆರೋಪಿಯು ಮನೆಯು ಸುಮಾರು 100 ಮೀಟರ ದೂರದಲ್ಲಿರುತ್ತದೆ. ಅಲ್ಲಿಂದ ಆರೋಪಿಯ ಮನೆ ಕಂಡು ಬರುತ್ತದೆ ಎಂದರೆ ಸರಿ. ಸದ್ರಿ ವಿಷಯ ಮೊದಲಿಗೆ ಆನಮೋಡ ಚೆಕ್ಕ ಪೋಸ್ಟನವರಿಗೆ ತಿಳಿದು ಬರುತ್ತದೆ ಎಂದರೆ ಸರಿ. ಗೋವಾದಿಂದ ವಾಹನದ ಮೂಲಕ ಮದ್ಯವನ್ನು ಸಾಗಾಟ ಮಾಡುವುದು ಇದ್ದಲ್ಲಿ ಆನಮೋಡ ಚೆಕ್ಕ ಪೋಸ್ಟ ನಿಂದಲೇ ಹೋಗಬೇಕಾಗುತ್ತದೆ ಎಂದರೆ ಸರಿ. ಸದ್ರಿ ಚೆಕ್ಕ ಪೋಸ್ಟನಲ್ಲಿ ಎಲ್ಲಾ ವಾಹನಗಳನ್ನು

ಪರಿಶೀಲನೆ ಮಾಡಿಯೇ ಬಿಡುತ್ತಾರೆ ಎಂದರೆ ಸರಿ. ಆರೋಪಿಯ ಮನೆಯ ಮುಂಭಾಗದಲ್ಲಿ ಅರಣ್ಯ ಇಲಾಖೆಯ ಹಾಗೂ ಸೇಲ್ ಟ್ಯಾಕ್ಸ ಚೆಕ್ಕ ಪೋಸ್ಟ ಇರುತ್ತದೆ ಎಂದರೆ ಸರಿ. ಸದ್ರಿ ಇಲಾಖೆಯ ಸಿಬ್ಬಂದಿಗಳನ್ನು ಪಂಚರಾಗಿ ಕರೆಸಿರುವುದಿಲ್ಲ. ಕಸದ ರಾಶಿಯ ಪೋಟೋವನ್ನು ತೆಗೆದಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

4. ದಾಳಿಯ ಕಾಲಕ್ಕೆ ಲ್ಯಾಪಟಾಪ, ಪ್ರಿಂಟರ, ಬಿಳಿ ಬಟ್ಟೆ ಹಾಗೂ ಇತರೇ ವಶಪಸಿಕೊಳ್ಳಬೇಕಾದ ಸಾಮ್ಯಾಗ್ರಿಗಳನ್ನು ತೆಗೆದುಕೊಂಡು ಹೋಗಿರುತ್ತೇವೆ. ಪಂಚನಾಮೆಯ ಕಾಲಕ್ಕೆ ಪೋಟೋವನ್ನು ತೆಗೆದಿರುತ್ತೇವೆ. ಅವುಗಳನ್ನು ನಾನು ತನಿಖಾಧಿಕಾರಿಗಳಿಗೆ ಹಸ್ತಾಂತರಿಸಿರುತ್ತೇನೆ. ಪಂಚನಾಮೆಯಲ್ಲಿ ಗಣಕೀಕೃತ ಮಾಡಿರುತ್ತೇವೆ ಎಂದು ಬರೆದಿರುತ್ತೇವೆ. ಪ್ರಿಂಟನ್ನು ಸ್ಥಳದಲ್ಲಿಯೇ ಮಾಡಿರುತ್ತೇವೆ. ಪಂಚನಾಮೆಗೆ ಚಾಸಾ 4 ರವರು ಸಹಿಯನ್ನು ಪಡೆದುಕೊಂಡಿಲ್ಲ. ಸಹಿಯನ್ನು ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಆರೋಪಿಯ ಮನೆಯ ಮೇಲೆ ಬರೆದ ಬರವಣಿಗೆಯನ್ನು ಪೋಟೋ ತೆಗೆದು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

5. ಓಮಿನಿ ವಾಹನ ಆರೋಪಿಯ ಮನೆಯ ಗೋಡೆಯ ಹಿಂಭಾಗದಲ್ಲಿತ್ತು. ಹಿಂಭಾಗಕ್ಕೆ ಹೋಗಲು ದಾರಿ ಇತ್ತು. ಪಂಚನಾಮೆಯಲ್ಲಿ ಅಲ್ಲಿಗೆ ಹೋಗಲು ರಸ್ತೆ ಇರುವ ಬಗ್ಗೆ ತಿಳಿಸಿರುವುದಿಲ್ಲ. ಆರೋಪಿಯ ಮನೆಯಿಂದ ರಸ್ತೆಯು ಕೆಳಭಾಗದಲ್ಲಿ ಇರುತ್ತದೆ. ಅಲ್ಲಿಗೆ ಹೋಗಲು ಕೇವಲ ಮೆಟ್ಟಲುಗಳು ಇದ್ದು ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ಆರೋಪಿಯ ಮನೆಯವರು ಇದ್ದರೋ ಇಲ್ಲವೋ ನನಗೆ ನೆನಪಿಲ್ಲಾ. ಆರೋಪಿಯ ಮನೆಯ ಮುಂಭಾಗದಲ್ಲಿ ಕಾರನ್ನು ನಿಲ್ಲಿಸಿ ಪೋಟೋವನ್ನು

ತೆಗೆದಿರುವುದಿಲ್ಲ. ಆರೋಪಿಯ ಮನೆಯು ಯಾರ ಹೆಸರಿನಲ್ಲಿರುತ್ತದೆ ಎಂದು ವಿಚಾರಣೆ ಮಾಡಿರುವುದಿಲ್ಲ. ಅದಕ್ಕೆ ಸಂಬಂಧಿಸಿದ ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಆರೋಪಿಯ ಮನೆಯಲ್ಲಿ ಸುಮಾರು 3 ಗಂಟೆಗಳ ಕಾಲ ಇದ್ದೇವು. ಆ ಸಮಯದಲ್ಲಿ ಅರಣ್ಯ ಇಲಾಖೆ ಹಾಗೂ ಸೇಲ್ ಟಾಕ್ಸ ಸಿಬ್ಬಂದಿಗಳು ಬಂದಿರುವುದಿಲ್ಲ. ಮುದ್ದೆ ಮಾಲಿನ ಮೇಲೆ ಸಹಿಯನ್ನು ಸ್ಥಳದಲ್ಲಿಯೇ ಪಡೆದುಕೊಂಡಿರುತ್ತೇವೆ. ಸದ್ರಿ ಸಹಿಯನ್ನು ಠಾಣೆಯಲ್ಲಿಯೇ ತಯಾರಿಸಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳನ್ನು ನಮ್ಮ ಸಿಬ್ಬಂದಿ ಯವರು ಏಣಿಕೆ ಮಾಡಿರುತ್ತಾರೆ ಅವರ ಹೆಸರು ನನಗೆ ನೆನಪಿಲ್ಲಾ. ಪಂಚನಾಮೆಗೆ ನಾಮದೇವ ಎಂಬ ಸಿಬ್ಬಂದಿಯು ದಸ್ತೂರು ಎಂದು ಸಹಿ ಮಾಡಿರುತ್ತಾರೆ. ದೂರನ್ನು ಠಾಣೆಯಲ್ಲಿಯೇ ತಯಾರಿಸಿರುತ್ತೇವೆ. ದೂರಿನಲ್ಲಿರುವ ಅಂಶಗಳನ್ನು ಪಂಚನಾಮೆಗೆ ನಕಲು ಮಾಡಿ ಅಳವಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

6. ನಾನು ಘಟನಾಸ್ಥಳಕ್ಕೆ ಹೋಗಿಲ್ಲ, ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯದ ದಸ್ತಾನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ಮುದ್ದೆ ಮಾಲನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಹೇಳಿಕೆಯನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಆದೇಶದ ಮೇರೆಗೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.